17. ವಿನ್ಯಾಸ ಅಂಗೀಕಾರ ಕೋರಿಕೆ ಸಂಬಂಧ ಸಲ್ಲಿಸಲಾಗಿರುವ ದಾಖಲೆ ಅಥವಾ ಬೇರೆ ಯಾವುದೇ ಮಾಹಿತಿಗಳು ತಪ್ಪಾಗಿದ್ದಲ್ಲಿ ಮೇಲ್ಕಂಡ ಯಾವುದೇ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಈ ಅನುಮೋದನೆಯು ಯಾವ ಪೂರ್ವ ಸೂಚನೆಯು ಇಲ್ಲದೇ ತಂತಾನೆ ರದ್ದುಗೊಳ್ಳುತ್ತದೆ.

18. ಮೇಲಿನಂತೆ ನೀಡಲಾಗಿರುವ ಅನುಮತಿಗೆ ವ್ಯತಿರಿಕ್ತವಾಗಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ವಿಧಿ 17(4)ರಂತೆ ಕ್ರಮ ಜರುಗಿಸಲಾಗುವುದು.

19. ಪ್ರಸ್ತಾವಿತ ವಿನ್ಯಾಸದಲ್ಲಿ ಸೂಕ್ತವಾದ ಕಡೆ ಪ್ರಮಾಣೀಕೃತ ರೀತಿಯಲ್ಲಿ ಸೀವರ್ಲೆಜ್ ಟ್ರೀಟ್‌ಮೆಂಟ್ ಪ್ಲಾಂಟ್ ಅನ್ನು ಸ್ಥಾಪಿಸಬೇಕು ಮತ್ತು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಷರತ್ತುಗಳನ್ನು ತಪ್ಪದೇ ಅನುಸರಿಸತಕ್ಕದ್ದು.

20. ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿ ಅಂಚಿನಲ್ಲಿ ಬಡಾವಣೆಗಳ ಉದ್ದಕ್ಕೂ ಡಾಂಬರು ರಸ್ತೆಯ ಮೇಲ್ಮೈನಿಂದ 2 ½ ಅಡಿ ಕೆಳಕ್ಕೆ ಚರಂಡಿಯ ಮೇಲ್ಮೈ ರಸ್ತೆಯ ಮಟ್ಟದಿಂದ ¾ ಅಡಿ ಕೆಳಕ್ಕೆ ರಸ್ತೆ ಮತ್ತು ಬಡಾವಣೆಯ ನೀರು ಚರಂಡಿಗೆ ಹೋಗುವಂತೆ ಕಾಂಕ್ರೀಟ್ ಚರಂಡಿ ನಿರ್ಮಿಸುವಂತೆ ಮತ್ತು ಬಡಾವಣೆಯ ಮುಖ್ಯದ್ವಾರಗಳಲ್ಲಿ ಸಹ ನೀರು ರಸ್ತೆಗೆ ಹರಿದು ಬರದಂತೆ ಚರಂಡಿ ನಿರ್ಮಿಸಿ ಅದರ ಮೇಲೆ ಸೂಕ್ತ ವ್ಯವಸ್ಥೆ (COW CATCHERS) ಗಳನ್ನು ಅಳವಡಿಸುವಂತೆ, ಮತ್ತು ಬಡಾವಣೆಯ ದ್ವಾರದಿಂದ ರಸ್ತೆಯ ಅಂಚಿನವರೆಗೆ ರಸ್ತೆಯನ್ನು ಎತ್ತರಿಸದಂತೆ ಸೂಚಿಸಲಾಗಿದೆ.

21. ಸದರಿ ಜಮೀನಿಗೆ ಸಂಬಂಧಿಸಿದಂತೆ ಯಾವುದೇ ಸಿವಿಲ್ ವ್ಯಾಜ್ಯಗಳಿಗೆ ಪ್ರಾಧಿಕಾರವು ಜವಾಬ್ದಾರಿಯಾಗಿರುವುದಿಲ್ಲ.

22. ಕರಡು ಅನುಮೋದಿತ ವಿನ್ಯಾಸ ನಕ್ಷೆಯನ್ನು ಸಾರ್ವಜನಿಕರ ವೀಕ್ಷಣೆಗಾಗಿ ಸ್ಥಳದಲ್ಲಿ ನಾಮಫಲಕದಲ್ಲಿ ಕಡ್ಡಾಯವಾಗಿ ಅಳವಡಿಸತಕ್ಕದ್ದು.

04/09/17

ಸದಸ್ಯ- ಕಾರ್ಯದರ್ಶಿ ಹಾಗೂ ನಗರ ಮತ್ತು
ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು,
ಆನೇಕಲ್ ಯೋಜನಾ ಪ್ರಾಧಿಕಾರ,
ಆನೇಕಲ್.

<u>ಪ್ರತಿಯನ್ನು:</u>

1. ಶ್ರೀವಿಜಯ ರಾಘವರೆಡ್ಡಿ ಬಿನ್ ಲೇ.ರಾಮರೆಡ್ಡಿ ಎಂ., ನಂ.855,ಫರ್ಸ್ಟ್‌ಪ್ಯಾರಡೈಸ್, ದೊಡ್ಡನೆಕ್ಕುಂದಿ, ಮಾರತ್ತಹಳ್ಳಿ ಅಂಚೆ, ಬೆಂಗಳೂರು-560 037 ಇವರಿಗೆ ಮಾಹಿತಿಗಾಗಿ ಕರಡು ವಿನ್ಯಾಸದ ನಕ್ಷೆಯೊಂದಿಗೆ ಕಳುಹಿಸಲಾಗಿದೆ.
2. ಪಂಚಾಯಿತ್ತಿ ಅಭಿವೃದ್ಧಿ ಅಧಿಕಾರಿಗಳು, ಕಲ್ಲುಬಾಳು ಗ್ರಾಮಪಂಚಾಯಿತ್ತಿ, ಜಿಗಣಿ ಹೋಬಳಿ, ಆನೇಕಲ್ ತಾಲ್ಲೂಕು, ಇವರಿಗೆ ಕರಡು ವಿನ್ಯಾಸದ ಪ್ರತಿಯೊಂದಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಲಾಗಿದೆ.